ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಪ್ರತಿಷ್ಠಿತ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿರಸ್ತೆ, ಮೈಸೂರು-೫೭೦ ೦೨೫

ESTD - 1964

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 04.01.2015

## ಪ್ರಕಟಣೆ ಕೃಪೆಗಾಗಿ

## ಜೆಎಸ್‌ಎಸ್ ಕಾಲೇಜಿನಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರ ಉಪನ್ಯಾಸ

ನಗರದ ಬಿ ಎನ್ ರಸ್ತೆಯಲ್ಲಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥಾಪಕರಾದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವ ಹಾಗೂ ಕಾಲೇಜು ಸುವರ್ಣ ಮಹೋತ್ಸವದ ಅಂಗವಾಗಿ 04.01.2016 ರಂದು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ನೊಬೆಲ್ ಪಾರಿತೋಷಕ ವಿಜ್ಞಾನಿಗಳಾದ ಸರ್ ಜಾನ್ ಬರ್‌ಟ್ರಾಂಡ್ ಗಾರ್ಡನ್ ರವರು ನ್ಯೂಕ್ಲಿಯರ್ ರೀಪ್ರೊಗ್ರಾಮಿಂಗ್  ಎಂಬ ವಿಷಯವನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು. ಭ್ರೂಣದಲ್ಲಿ ಅಂಡಾಣು  ಮತ್ತು ವೀರ್ಯಾಣುವಿನ ಕಸಿ ಮುಂದಿನ ಜನಾಂಗಕ್ಕೆ ಹೇಗೆ ಉಪಯುಕ್ತವಾಗುತ್ತದೆ ಎಂದು ತಾವು  ಮಾಡಿದ ಪ್ರಯೋಗಗಳ ಬಗ್ಗೆ ತಿಳಿಸಿದರು. ಒಂದು ಅಣುವನ್ನು ಜೀವಕೋಶದ ಒಳಗೆ ಸಂಧಿಸಿ ಮತ್ತೊಂದು ಜೀವವನ್ನು ಸೃಷ್ಟಿಸುವ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದರು. ಇದು ಎಲ್ಲಾ ಜೀವಿಗಳಲ್ಲಿಯೂ ಸಾಧ್ಯವಿಲ್ಲ ಮತ್ತು ತುಂಬಾ ಕಷ್ಟಕರವಾದ ಪ್ರಕ್ರಿಯೆ ಎಂದು ತಿಳಿಸುತ್ತಾ ಇದೇ  ಪ್ರಕ್ರಿಯೆಯಲ್ಲಿ ಡಾಲಿ ಎಂಬ ಕುರಿಯನ್ನ ಸೃಷ್ಟಿಸಲಾತ್ತು ಎಂದು ತಿಳಿಸಿದರು. ತದನಂತರ ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ ಸುರೇಶ್ ರವರು ಸಾಧನೆಗಳನ್ನು ಮಾಡಲು ವಯಸ್ಸು ಮುಖ್ಯವಲ್ಲ ಯಾವ ವಯಸ್ಸಿನಲ್ಲಾದರು ಸಾಧನೆಗಳನ್ನು ಮಾಡಬಹುದು ಅದಕ್ಕೆ ಜ್ವಲಂತ ಉದಾಹರಣೆ ಸರ್ ಜಾನ್ ಬರ್‌ಟ್ರಾಂಡ್ ಗಾರ್ಡನ್ ರವರು ಎಂದು ತಿಳಿಸುತ್ತಾ, ಪೋಷಕರು ತಮ್ಮ ಮಕ್ಕಳನ್ನು ಕೇವಲ ಡಾಕ್ಟರ್ ಅಥವಾ ಇಂಜಿನಿಯರ್‌ಗಳನ್ನು ಮಾಡುವ ಬದಲು ವಿಜ್ಞಾನಿಗಳಾಗಲು ಪ್ರೋತ್ಸಾಹಿಸಬೇಕೆಂದು ಕರೆನೀಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ ಟಿ ಡಿ ಸುಬ್ಬಣ್ಣ, ಸಹಾಯಕ ನಿರ್ದೇಶಕರಾದ ಶ್ರೀ ಬಿ ನಿರಂಜನಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯದ ಜೀವಶಾಸ್ತ್ರ ವಿಭಾಗದ ಡಾ. ಎಸ್ ಆರ್ ರಮೇಶ್, ಕಾಲೇಜು ಸುವರ್ಣ ಮಹೋತ್ಸವ ಸಮಿತಿ ಕಾರ್ಯದರ್ಶಿಗಳಾದ ಪ್ರೊ ಡಿ ಎಸ್ ಸದಾಶಿವಮೂರ್ತಿರವರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ . ಕು. ವಿದ್ಯಾಶ್ರೀ ಯವರು ಪ್ರಾರ್ಥಿಸಿದರೆ, ಕಾಲೇಜಿನ  ಮುಖ್ಯ ಕಾರ್ಯನಿರ್ವಾಹಕರಾದ  ಪ್ರೊ ಬಿ ವಿ ಸಾಂಬಶಿವಯ್ಯ ರವರು ಸ್ವಾಗತಿಸಿದರು. ಡಾ. ಎಸ್ ಆರ್ ರಮೇಶ್ ರವರು ಅತಿಥಿಗಳನ್ನು ಪರಿಚಯಿಸಿದರೆ, ಪ್ರಾಚಾರ್ಯರಾದ ಪ್ರೊ ಎಂ ಮಹದೇವಪ್ಪನವರು ವಂದಿಸಿದರು ಹಾಗೂ ಡಾ ಟಿ ವಿ ಲತಾರವರು ಕಾರ್ಯಕ್ರಮ ನಿರೂಪಿಸಿದರು

ಪ್ರಾಂಶುಪಾಲರು
(ಪ್ರೊ ಎಂ ಮಹದೇವಪ್ಪ)

ಜೆ.ಎಸ್.ಎಸ್.ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570025

ಗೆ
ಸಂಪಾದಕರು
______________
______________
ಮೈಸೂರು